ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ಪಷ್ಟವಾಗಿ ಹೇಳಿ ಆಜ್ಞೆ ಹೊರಡಿಸಿದ್ದೇವೆ. ಆ ಕಾಲದಲ್ಲಿ ಯಾರು ಯಾರಿಗೆ ಲಾಭ ಆಯಿತು ಅದನ್ನು ವಾಪಸ್ ತೆಗೆದು ಕೊಳ್ಳಿ ಎಂದು ಕೇಂದ್ರದ ಆದೇಶ ಇದೆ ಸ್ವಾಮಿ.

ಇದನ್ನು ಕೂಡ ವಾಪಸ್ಸು ಪಡೆಯಬೇಕಾಗುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—೬೫ ಪರ್ಸೆಂಟ್ ಏನಿದೆ, ಅದನ್ನು ೩೨ ಪರ್ಸೆಂಟ್‌ಗೆ ಏತಕ್ಕೆ ಇಳಿಸಿದಿರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಾ ಮಿ, ಇಷ್ಟೊತ್ತು ಹೇಳಿದ್ದೇನೆ. ೬೫ ಪರ್ಸೆಂಟ್ ೯ ಜಿಲ್ಲೆಗಳಿಗೆಂದು ಕೇಂದ್ರದಿಂದ ಪತ್ರ ಬಂತು ಅದರ ಪ್ರಕಾರ ಆದೇಶ ಕೊಟ್ಟಿದ್ದೆವು. ತದನಂತರ, ೯ ಜಿಲ್ಲೆಗಳಲ್ಲಿ ೪೦ ತಾಲ್ಲೂಕುಗಳು ಮಾತ್ರ ಕೊಡಬೇಕೆಂದು ಪತ್ರ ಬಂತು. ಅದರ ಪ್ರಕಾರ ೪೦ ತಾಲ್ಲೂಕುಗಳನ್ನು ಬಿಟ್ಟರೆ, ಬೇರೆ ತಾಲ್ಲೂಕುಗಳಿಗೆ ಇದನ್ನು ಅನ್ವಯಿಸುವುದಿಲ್ಲ.

ಮಂತ್ರಿಗಳ ಹೇಳಿಕೆ.

ಸ್ಪೃಶ್ಯೇತರ ಪದವೀಧರರ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡ ನಿರ್ಣಯದ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ತಮ್ಮ ಅಪ್ಪಣೆ ಪಡೆದು, ಸ್ಪೃಶ್ಯೇತರ ಪದವೀಧರರ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ಈ ಒಂದು ಹೇಳಿಕೆ ಕೊಡುತ್ತೇನೆ.

ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಸ್ಪೃಶ್ಯೇತರ ಪದವೀಧರರ ಸಮಸ್ಯೆ ಕಳೆದ ೧೦ ವರ್ಷಗಳಿಂದಲೂ ಸರ್ಕಾರದ ಮುಂದಿದೆ. ಅವರನ್ನು ಸಕ್ರಮವಾಗಿ ಸರ್ಕಾರಿ ಹುದ್ದೆಗಳಲ್ಲಿ ನೇಮಿಸಿಕೊಳ್ಳುವ ಉದ್ದೇಶದಿಂದ ೧೯೮೨ರಲ್ಲಿ ವಿಶೇಷ ನಿಯಮಗಳನ್ನು ಹೊರಡಿಸಿ ಅದರಂತೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ಗ್ರೂಪ್-ಸಿ ಹುದ್ದೆಗಳ ಶೇಕಡ ೫೦ ರಷ್ಟನ್ನು ಸ್ಪೃಶ್ಯೇತರ ಪದವೀಧರರಿಗೂ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೂ ಕಾಯ್ದಿಡುವಂತೆ ಅವಕಾಶ ಕಲ್ಪಿಸಲಾಯಿತು. ಇದುವರೆಗೆ ಸ್ಪೃಶ್ಯೇತರ ಪದವೀಧರರ ಸಂಖ್ಯೆ ಒಟ್ಟು ೧೪,೦೦೦ ದಿಂದ ಸುಮಾರು ೮,೫೦೦ ಕ್ಕೆ ಇಳಿದಿದೆ. ಸ್ಥಳೀಯ ಅಭ್ಯರ್ಥಿಗಳ ನೇಮಕಾತಿಯನ್ನು ಇತ್ತೀಚೆಗೆ ಸಕ್ರಮಗೊಳಿಸಲಾಯಿತು. ಆದೇ ತೆರನಾಗಿ ಸ್ಪೃಶ್ಯೇತರ ಪದವೀಧರ ನೇಮಕಾತಿಯನ್ನು ಸಕ್ರಮಗೊಳಿಸುವುದಕ್ಕಾಗಿ ಮನವಿಗಳು ಬರುತ್ತಿವೆ ಮತ್ತು ಈ ಸದನದಲ್ಲಿ ಹಾಗೂ ಅನ್ಯವೇದಿಕೆಗಳ ಮೇಲೆ ಮಾನ್ಯ ಸದಸ್ಯರು ಸ್ಪೃಶ್ಯೇತರ ಪದವೀಧರರ ಪರವಾಗಿ ಅವರ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಇದ್ದಾರೆ.

೨ ಈ ಹಿನ್ನಲೆಯಲ್ಲಿ ಸ್ಪೃಶ್ಯೇತರ ಪದವೀಧರರನ್ನು ಸರ್ಕಾರದ ಹುದ್ದೆಗಳಲ್ಲಿ ಇನ್ನೂ ತೀವ್ರವಾಗಿ ಖಾಯಂ ಹುದ್ದೆಗಳಲ್ಲಿ ನೇಮಿಸಿಕೊಳ್ಳುವ ದೃಷ್ಟಿಯಿಂದ ಸಹ ಸರ್ಕಾರವು ಆಲೋಚಿಸಿ ಮತ್ತು ಅವರ ಸಂಘದ ಪದಾಧಿಕಾರಿಗಳೊಡನೆ ಚರ್ಚಿಸಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆ.—

೧) ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ಗ್ರೂಪ್-ಸಿ ರಿಕ್ತ ಸ್ಥಾನಗಳಲ್ಲಿ ಶೇಕಡ ೪೦ ರಷ್ಟನ್ನು ಕೇವಲ ಸ್ಪೃಶ್ಯೇತರ ಪದವೀಧರರಿಗಾಗಿಯೇ ಕಾಯ್ದಿಡಲಾಗುವುದು ಮತ್ತು ಸ್ಥಳೀಯ ಅಭ್ಯರ್ಥಿಗಳಿಗಾಗಿರುವ ಶೇಕಡ ೧೦ ರಷ್ಟನ್ನು ತುಂಬಲು ಅವರು ದೊರಕದೇ ಉಳಿದು ಹೋಗಿರುವ ರಿಕ್ತ ಸ್ಥಾನಗಳನ್ನು ಸಹ ಸ್ಪೃಶ್ಯೇತರ ಪದವೀಧರರಿಗೇ ಕೊಡ ಲಾಗುವುದು.

೨) ಸ್ಪೃಶ್ಯೇತರ ಪದವೀಧರರಾಗಿ ಮುಂದುವರಿಯುತ್ತಿರುವವರ ಒಂದು ಸಾಮಾನ್ಯ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಆ ಪಟ್ಟಿಯಲ್ಲಿರುವ ಜ್ಯೇಷ್ಠತೆಯ ಪ್ರಕಾರ ನೇಮಕಾತಿ ಪ್ರಾಧಿಕಾರಗಳಿಂದ ಕೋರಿಕೆ ಬಂದ ಕ್ರಮಾಂಕದಲ್ಲಿ ನೇಮಕಾತಿ ಆದೇಶಗಳನ್ನು ನೀಡುವು ದಕ್ಕಾಗಿ ಸ್ಪೃಶ್ಯೇತರ ಪದವೀಧರರ ಹೆಸರನ್ನು ಸೂಚಿಸಲಾಗುವುದು ಮತ್ತು ನೇಮಕಾತಿ ಪ್ರಾಧಿಕಾರಗಳು ಅಂತಹ ಸ್ಪೃಶ್ಯೇತರ ಪದವೀಧರರನ್ನು ಯಾವುದೇ ಪರೀಕ್ಷೆಗೆ ಅಥವಾ

ಸಂದರ್ಶನಕ್ಕೊಳಪಡಿಸದೆ ನೇಮಿಸುವಗಂ, ಆದರೆ ಹುದ್ದೆಗಳಿಗೆ ನಿಗದಿಗೊಳಿಸಲ್ಪಟ್ಟ ವಿದ್ಯಾರ್ಹತೆಯಲ್ಲಿ ಯಾವುದೇ ತರಹದ ಸಡಿಲತೆ ನೀಡಲಾಗುವುದಿಲ್ಲ. ಸ್ಪೃಶ್ಯ ಪಂಡಿಯರಿ ಪದವೀಧರರಿಗೆ ಈಗಾಗಲೇ ಗರಿಷ್ಠ ವಯೋಮಿತಿಯಲ್ಲಿ ೧೦ ವರ್ಷಗಳ ರಿಯಾಯಿತಿಯನ್ನು ನೀಡಲಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

೩) ನೇಮಕಾತಿ ಆದೇಶ ದೊರಕಿದ ಬಳಿಕ ಸ್ಪೃಶ್ಯ ಪಂಡಿಯರಿ ಪದವೀಧರರು ಕೆಲಸಕ್ಕೆ ಹಾಜರಾಗದಿದ್ದಲ್ಲಿ ಅವರಿಗೆ ಸ್ಪೃಶ್ಯ ಪೆಂಡ್ ಕೊಡುವುದನ್ನು ನಿಲ್ಲಿಸಲಾಗುವುದು, ಮತ್ತು ಅವರ ಹೆಸರುಗಳನ್ನು ಇನ್ನೊಮ್ಮೆ ಯಾವುದೇ ನೇಮಕಾತಿ ಪ್ರಾಧಿಕಾರಕ್ಕೆ ಸೂಚಿಸ ಲಾಗುವುದಿಲ್ಲ

೪) ಅಂಗವಿಕಲರಿಗೆ ಸಲ್ಲಬೇಕಾದ ವಿಾಸಲಾತಿಯನ್ನು ಸ್ಪೃಶ್ಯ ಪಂಡಿಯರಿ ಪದವೀಧರ ಅಂಗವಿಕಲರಿಗೆ ಸಹ ನೀಡಲಾಗುವುದು.

೩ ಈ ಮೇಲಿನ ಕ್ರಮಗಳಿಗೆ ಸ್ಪೃಶ್ಯ ಪಂಡಿಯರಿ ಪದವೀಧರರ ಸಂಘದ ಪದಾಧಿಕಾರಿಗಳು ಅವರ ಒಪ್ಪಿಗೆಯನ್ನು ನೀಡಿದ್ದಾರೆ.

೪ ಸ್ಪೃಶ್ಯ ಪಂಡಿಯರಿ ಪದವೀಧರರಿಗೆ ಅತೀ ತೀವ್ರವಾಗಿ ಖಾಯಂ ಹುದ್ದೆಗಳನ್ನು ನೀಡುವ ಉದ್ದೇಶದಿಂದ ಅವರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ಪಂಗಡ ಮತ್ತಿತರ ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ವಿಾಸಲಾತಿ ಆದೇಶ ಜಾರಿಗೊಳಿಸುವುದನ್ನು ಮುಂದೂ ಮಾಡಬೇಕೆಂದು ನಿರ್ಧರಿಸಲಾಗಿದೆ.

೫ ಸ್ಪೃಶ್ಯ ಪಂಡಿಯರಿ ಪದವೀಧರರನ್ನು ಮೊದಲು ನೇಮಿಸಿದಾಗ ಅವರಿಗೆ ರೂ. ೧೫೦-೦೦ ಸ್ಪೃಶ್ಯ ಪೆಂಡನ್ನು ಕೊಡಲಾಗುತ್ತಿತ್ತು. ಇದನ್ನು ಆಗಿಂದಾಗ್ಗೆ ಈ ರೀತಿ ಪರಿಷ್ಕರಿಸಲಾಗಿದೆ.—

೧೯೮೧ ಫೆಬ್ರವರಿ	ರೂ. ೧೫೦ ರಿಂದ ೨೦೦
೧೯೮೪ ಫೆಬ್ರವರಿ	ರೂ. ೨೦೦ ರಿಂದ ೩೦೦
೧೯೮೪ ಡಿಸೆಂಬರ್	ರೂ. ೩೦೦ ರಿಂದ ೪೯೦ (ಜಾರಿಯಲ್ಲಿದೆ)
	ರೂ. ೫೦ ವಾಹನ ಭತ್ಯೆ.

ಇತ್ತೀಚೆಗೆ ಸರ್ಕಾರಿ ನೌಕರರ ಸಂಬಳ ಸಾರಿಗೆ ಪರಿಷ್ಕರಿಸಿದ ಹಿನ್ನೆಲೆಯಲ್ಲಿ ಸ್ಪೃಶ್ಯ ಪಂಡಿಯರಿ ಪದವೀಧರರಿಗೆ ಸಹ ಸ್ವಲ್ಪ ಮಟ್ಟಿನ ಹೆಚ್ಚುವರಿ ಸ್ಪೃಶ್ಯ ಪೆಂಡ್ ನೀಡಬೇಕೆಂಬ ಮಾನವಿಯನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಿದೆ. ಆದರಂತೆ ಸ್ಪೃಶ್ಯ ಪಂಡಿಯರಿ ಪದವೀಧರರಿಗೆ ಇನ್ನೂ ರೂ. ೧೦೦ ಹೆಚ್ಚುವರಿ ನೀಡಲು ನಿರ್ಧರಿಸಲಾಗಿದೆ. ಸ್ಪೃಶ್ಯ ಪಂಡಿಯರಿ ಪದವೀಧರರು, ಮಾನ್ಯ ಸದಸ್ಯರು ಮತ್ತು ಸಾರ್ವಜನಿಕರು ಸರ್ಕಾರದ ಈ ನಿರ್ಣಯಗಳನ್ನು ಸ್ವಾಗತಿಸುವರೆಂದು ನಾನು ನಂಬಿದ್ದೇನೆ.

ಅಧ್ಯಕ್ಷರೇ, ಒಂದೇ ಒಂದು ವಿವರಣೆಯನ್ನು ಕೊಡುತ್ತೇನೆ. ಎಲ್ಲಾ ಪದಾಧಿಕಾರಿಗಳು, ಸ್ಟೇಟ್ ಕಮಿಟಿ ಅಧ್ಯಕ್ಷರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳುತ್ತೇನೆ.

ನಿಯಮ ೩೩ಳಿರ ಮೇರೆಗೆ

ಅಧ್ಯಕ್ಷರು.—ಆಯಿತು. ಶ್ರೀ ಮುನಿಸ್ವಾಮಯ್ಯನವರೇ, ೩೩ಳಿರ ನಿಯಮದ ಪ್ರಕಾರ ಕೇಳಿ.

೧) ಬಂಗಾರಪೇಟೆಯ ಬಿ. ಡಿ. ಓ. ರವರುಗಳಲ್ಲಿ ವೈಷಮ್ಯ ಬೆಳೆದಿರುವುದು.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಬಂಗಾರಪೇಟೆ ಪ್ರೊಬೇಷನರಿ ಬಿ ಡಿ ಓ ವೆಂಕಟನಾರಾಯಣ ನಾಯಕ್‌ರವರು ಎನ್ ಇ ಎಸ್ ಗೆ ಮಾತ್ರ ಚಾರ್ಜ್ ಇದ್ದು ೨ ಡಿ ಬಿ ಗೆ ಚಾರ್ಜ್ ಇಲ್ಲದಿರುವುದು ಖಜಾನೆ ಚೆಕ್ಕುಗಳಿಗೆ ಸಹಿ ಹಾಕಿ ಹಣ ಡ್ರಾ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಖಾಯಂ ಬಿ ಡಿ ಓ ಅಬ್ದುಲ್ ಗಫಾರ್‌ರವರಿಗೂ ಪ್ರೊಬೇಷನರಿ ಬಿ ಡಿ ಓ ಅವರಿಗೂ ವೈಷಮ್ಯ ಬೆಳೆದು ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವ ಬಗ್ಗೆ ಗ್ರಾಮಾಭಿವೃದ್ಧಿ ಮಂತ್ರಿಗಳು ಹೇಳಿಕೆ ನೀಡಬೇಕೆಂದು ಕೋರುತ್ತೇನೆ.